**21400**

064

**ಮೊದಲನೆಯ ಚತುರ್ಮಾಸ ಬಿ.ಬಿ.ಎ. ಪರೀಕ್ಷೆ – ಮಾರ್ಚ್/ಏಪ್ರಿಲ್ 2022**

**ಸ್ಕೀಮ್: ಸಿಬಿಸಿಎಸ್ (ಎನ್‌ಇಪಿ)**

**ಕನ್ನಡಭಾಷೆ**

**ನಿರ್ವಹಣಾ ಸೌರಭ – ೧**

**ಸಮಯ: 2 ½ ಗಂಟೆ** **ಗರಿಷ್ಠ ಅಂಕ: 60**

**1. ಒಂದು ಪ್ರಶ್ನೆಗೆ ಉತ್ತರಿಸಿ.** **1x10=10**

೧. ಪರಭಾಷೆಯ ವ್ಯಾಮೋಹದಿಂದ ಸಾಯುತ್ತಿರುವ ಕನ್ನಡ ಭಾಷೆಯ ವಾಸ್ತವಿಕ ಅರಿವು ಮತ್ತು ಎಚ್ಚರಿಕೆ 'ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ!' ಕವನದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ? ವಿಮರ್ಶಾತ್ಮಕವಾಗಿ ಬರೆಯಿರಿ.

೨. ಪಾಳೆಯ ಪಟ್ಟೊಂದರ ರಾಜಕೀಯ ಹಾಗೂ ಕೌಟುಂಬಿಕ ಕಥನಗಳೆರಡನ್ನು ಏಕಕಾಲಕ್ಕೆ ಹೇಳುವ ಕಥೆ 'ನಿಜಗಲ್ಲಿನ ರಾಣಿ' _ ವಿಷದಪಡಿಸಿ.

**2. ಒಂದು ಪ್ರಶ್ನೆಗೆ ಉತ್ತರಿಸಿ.** **1x10=10**

೧. ವರ್ತಮಾನ ಮತ್ತು ಭವಿಷ್ಯತ್ತಿನ ಮಿತಿಯನ್ನು 'ಮುಂಬೈಜಾತಕ' ಕವನ ಚಿತ್ರಿಸಿರುವ ಬಗೆ ಹೇಗೆ? ವಿವರಿಸಿ.

೨. ಗ್ರಾಮೀಣ ಜನರ ಬದುಕಿನ ಸ್ವರೂಪವನ್ನು 'ಡಾಂಬರು ಬಂದುದು' ಕಥೆ ಹೇಗೆ ಅನಾವರಣಗೊಳಿಸುತ್ತದೆ? ವಿಶ್ಲೇಷಿಸಿ.

**3. ಒಂದು ಪ್ರಶ್ನೆಗೆ ಉತ್ತರಿಸಿ.** **1x10=10**

೧. 'ನೆಲಮೂಲ ಮತ್ತು ಶ್ರಮಮೂಲದ ಸಂಸ್ಕೃತಿಯೇ 'ಅವ್ವ' ಎಂಬುದನ್ನು ಎಲ್. ಹನುಮಂತಯ್ಯನವರ ಕವನದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿ.

೨. ರಾಣಿಯ ಮಾನಸಿಕ ತೊಳಲಾಟ 'ತುಂಬಿದ ಕೊಡ' ಕಥೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ವಿವರಿಸಿ.

**4. ಒಂದು ಪ್ರಶ್ನೆಗೆ ಉತ್ತರಿಸಿ:** **1x10=10**

೧. ದೇಶಾಭಿಮಾನ ಮತ್ತು ಮಾನವೀಯ ಸಂಬಂಧದ ಹಿನ್ನೆಲೆಯಲ್ಲಿ 'ಯುದ್ಧ' ಕವನದ ಆಶಯವನ್ನು ವಿವರಿಸಿ.

೨. ಮಾನವನ ಜೀವನದಲ್ಲಿ ಮೌಢ್ಯತೆಗಳು ತಂದೊಡ್ಡುವ ಆತಂಕಗಳು ತೇಜಸ್ವಿಯವರ ಕಥೆಯಲ್ಲಿ ಹೇಗೆ ಒಡಮೂಡಿದೆ? ವಿವರಿಸಿ.

**ಪು.ತಿ.ನೋ.**

MFGC LIBRARY

5. ಎರಡರ ಸಂದರ್ಭ – ಸ್ವಾರಸ್ಯವನ್ನು ವಿವರಿಸಿ. 2x5=10

೧. ಕನ್ನಡ ನುಡಿಯೇ ಕವಿತೆಯನಾಳಲಿ!

೨. ರಸ್ತೆಗಳು ಮಲಗುವ ಕನಸನು ಎಂದಿಗೂ ಕಾಣಲಾರವು.

೩. ಅಮ್ಮ ಎಲ್ಲಿ ಹೋತು ಎನುತ ಅತ್ತು ಸೊರಗಿತು.

೪. ಕನ್ನಡ ತೊಟ್ಟಿಲು ಕನ್ನಡ ಜೋಗುಳ ಕನಸೂ ಕನ್ನಡವೆ!

6. ಒಂದು ವಿಷಯ ಕುರಿತು ಬರೆಯಿರಿ. 1x5=5

೧. 'ಗೃಹ ಶಿಕ್ಷಣ ಎಷ್ಟು ಅತ್ಯಗತ್ಯ' ಎಂಬುದನ್ನು ನಿಮ್ಮ ಅನುಭವದ ಹಿನ್ನೆಲೆಯಲ್ಲಿ ಬರೆಯಿರಿ.

೨. 'ಮಾನವೀಯತೆ'ಯನ್ನು ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

7. ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. 5x1=5

೧. ನಿತ್ಯೋತ್ಸವದ ಕವಿಯೆಂದೇ ಪ್ರಸಿದ್ಧರಾದವರು ಯಾರು?

೨. 'ಹಾದಿ ಹಾಡು' ಕವನವನ್ನು ಬರೆದವರು ಯಾರು?

೩. 'ತುಂಬಿದ ಕೊಡ' ಕಥೆಯ ನಾಯಕಿ ಯಾರು?

೪. 'ಡಾಂಬರು ಬಂದುದು' ಕಥೆಯ ಲೇಖಕರು ಯಾರು?

೫. ಕರ್ನಾಟಕದ ಗಾಂಧಿ ಎಂದು ಯಾರನ್ನು ಕರೆಯುತ್ತಾರೆ.

** *** **

MFGC LIBRARY